ಹೊರದೇಶಗಳಲ್ಲಿರುವ ಅನಿವಾಸಿ ಭಾರತೀಯರವರಿಂದ ಬಂಡವಾಳ ಹೂಡಿಕೆ

೭೮ (೧೭) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಭಾರಿ, ಮಧ್ಯಮ ಕೈಗಾರಿಕಾ ಹಾಗೂ ವಿದ್ಯುಚ್ಚಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಪ್ರಸಕ್ತ ಕೈಗಾರಿಕಾ ಸಚಿವರು ಅವರು ಸಚಿವರಾದ ನಂತರ ಹೊರದೇಶಗಳಲ್ಲಿರುವ ಅನಿವಾಸಿ ಭಾರತೀಯರ ಮೂಲಕ ರಾಜ್ಯದ ಕೈಗಾರಿಕೆಗಳಲ್ಲಿ ಬಂಡವಾಳ ಹೂಡಿಸಲು ಯಾವ ಯಾವ ದೇಶಗಳಿಗೆ ಎಷ್ಟು ಬಾರಿ ಹೋಗಿದ್ದಾರೆ? ಪ್ರವಾಸದ ಅವಧಿ ಎಷ್ಟು?

ಆ) ಅಂತಹ ಅನಿವಾಸಿ ಭಾರತೀಯರು ಈ ರಾಜ್ಯದಲ್ಲಿ ಪ್ರಾರಂಭಿಸಿರುವ ಕೈಗಾರಿಕೆಗಳು ಎಷ್ಟು ಮತ್ತು ಅವುಗಳಲ್ಲಿ ಹೂಡಿರುವ ಬಂಡವಾಳ ಎಷ್ಟು?

ಶ್ರೀ ಜೆ.ಹೆಚ್. ಪಟೀಲ್ (ಕೈಗಾರಿಕೆ ಮತ್ತು ವಿದ್ಯುಚ್ಚಕ್ತಿ ಸಚಿವರು).—

ಅ) ಜಪಾನ್, ದಕ್ಷಿಣ ಕೊರಿಯ, ಥೈಲೆಂಡ್, ಹಾಂಕಾಂಗ್, ಸಿಂಗೆಪೂರ್, ಒಂದು ಬಾರಿ. ೨೧ ದಿವಸಗಳು. ೪-೪-೧೯೮೬ ರಿಂದ ೨೪-೪-೮೬ರವರೆಗೆ. ಅಮೆರಿಕ ಸಂಯುಕ್ತ ಸಂಸ್ಥಾನಗಳು, ಬ್ರಿಟನ್, ಕೆನಡಾ ಒಂದು ಬಾರಿ. ೨೧ ದಿವಸಗಳು.

ಆ) ೨೮. ೨೬.೭೦ ಕೋಟಿ ರೂಪಾಯಿಗಳು.

ಶ್ರೀ ಬಿ. ಲಕ್ಕಪ್ಪ.—ಎಷ್ಟು ಜನ ಬಂಡವಾಳವನ್ನು ತೊಡಗಿಸಿದ್ದಾರೆಂದು ಹೇಳಿ?

ಶ್ರೀ ಜೆ.ಹೆಚ್. ಪಟೀಲ್.—ಅವರ ಹೆಸರು ಮತ್ತು ಅವರು ಎಷ್ಟು ಬಂಡವಾಳ ಹೂಡಿದ್ದಾರೆ ಎನ್ನುವ ಬಗ್ಗೆ ಒಂದು ದೊಡ್ಡ ಲಿಸ್ಟೇ ಇದೆ. ಅದನ್ನು ಕೊಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಆ ಪಟ್ಟಿಯನ್ನು ಸದನದ ಮುಂದೆ ಇಡಿ.

ಶ್ರೀ ಜೆ.ಹೆಚ್. ಪಟೀಲ್.—ಅದರ ಪಟ್ಟಿಯನ್ನು ಸದನದ ಮುಂದೆ ಇಡುತ್ತೇನೆ. ಮಾನ್ಯ ಸದಸ್ಯರು ಎಷ್ಟು ಬಂಡವಾಳವನ್ನು ಹೂಡಿದ್ದಾರೆಂದು ಕೇಳಿದ್ದಾರೆ. ೨೬ ಪ್ರಾಜೆಕ್ಟ್‌ಗಳು ಈಗ ಪ್ರಾರಂಭವಾಗಿವೆ. ಇವುಗಳಲ್ಲಿ ೨೪೮ ಕೋಟಿ ರೂಪಾಯಿ ಬಂಡವಾಳವನ್ನು ತೊಡಗಿಸಲಾಗುತ್ತದೆ. ೨೬ ಪ್ರಾಜೆಕ್ಟ್‌ಗಳ ಪೈಕಿ ಒಂದು ಪ್ರಾಜೆಕ್ಟ್‌ನಲ್ಲಿ ಪ್ರೊಡಕ್ಷನ್ ಶುರುವಾಗಿದೆ. Totally 81 projects are likely to come and out of them 26 projects have already been initiated and one has already been commissioned.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ, ಜಪಾನ್, ದಕ್ಷಿಣ ಕೊರಿಯ, ಥೈಲೆಂಡ್, ಹಾಂಕಾಂಗ್, ಸಿಂಗಪುರ್‌ಗಳಿಗೆ ಮೊದಲ ಬಾರಿಗೆ ತಾವು ಹೋದಾಗ ತಮ್ಮ ಜೊತೆಯಲ್ಲಿ ಯಾರನ್ನು ಕರೆದುಕೊಂಡು ಹೋಗಿದ್ದೀರಿ? ನಿಮ್ಮ ಪ್ರವಾಸಕ್ಕಾಗಿ ಆಗಿರುವ ಖರ್ಚೆಷ್ಟು? ಹಾಗೂ ಅಲ್ಲಿಂತೆ ಏನೇನು ತಂದಿದ್ದೀರಿ? ಮತ್ತೆ ಎರಡನೇ ಬಾರಿಗೆ ಅಮೆರಿಕ ಸಂಯುಕ್ತ ಸಂಸ್ಥಾನಗಳು, ಬ್ರಿಟನ್, ಕೆನಡಾ ದೇಶಗಳಿಗೆ ಹೋಗಿದ್ದೀರಿ. ಈ ಪ್ರವಾಸಕ್ಕಾಗಿ ಎಷ್ಟು ಹಣವನ್ನು ಸರ್ಕಾರದ ಬೊಕ್ಕಸದಿಂದ ಖರ್ಚು ಮಾಡಲಾಗಿದೆ? ಹಾಗೂ ೨೮ ಕೈಗಾರಿಕೆಗಳನ್ನು ಪ್ರಾರಂಭ ಮಾಡಲಾಗಿದೆ ಎಂದು ಹೇಳಿದ್ದೀರಿ. ಈ ಕೈಗಾರಿಕೆಗಳು ನೀವು ವಿದೇಶಕ್ಕೆ ಪ್ರವಾಸ ಹೋಗಿ ಬಂದಮೇಲೆ ಪ್ರಾರಂಭವಾದವೋ ಅಥವಾ ಮೊದಲೇ ಪ್ರಾರಂಭವಾಗಿದ್ದವೋ ಎಂಬುದನ್ನು ತಿಳಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮ ಪ್ರವಾಸ ಸುಖಕರವಾಗಿತ್ತೇ ಎಂಬುದನ್ನೂ ತಿಳಿಸಿ.

ಶ್ರೀ ಜೆ.ಹೆಚ್. ಪಟೀಲ್.—ಆ ಪ್ರವಾಸ ಎಷ್ಟು ಸುಖಕರವಾಗಿತ್ತು ಎಂದು ನನಗೊಬ್ಬನಿಗೆ ಮಾತ್ರ ಗೊತ್ತು.

ಅಲ್ಲಿ ಬೆಳಿಗ್ಗೆ ೮ ಗಂಟೆಯಿಂದ ರಾತ್ರಿ ೭ ಗಂಟೆಯ ತನಕ ಒಂದು ಕಡೆಯಿಂದ ಮತ್ತೊಂದು ಕಡೆಗೆ, ಆ ಕಾರ್ಖಾನೆ, ಈ ಕಾರ್ಖಾನೆ ಎಂದು ತಿರುಗಾಡುತ್ತಾ ಇರುವುದು. ಅಲ್ಲಿನ ವಿಷಯಗಳನ್ನು ಸಂಗ್ರಹಿಸುವುದು, ಹೀಗೆಲ್ಲಾ ಕೆಲಸ ಮಾಡಿದ್ದೇವೆ. ಅದು ಎಷ್ಟು ಸುಖಕರವಾಗಿತ್ತು ಎಂದು ಅನುಭವಿಸಿಕೊಂಡಿರುವವರೆಗೆಗೊತ್ತು. ಒಟ್ಟಿನಲ್ಲಿ ಈಗ ಹೋದಾಗ ಮಾತ್ರ ಅದು ಸುಖವಾಗಿರಲಿಲ್ಲ, ಸುಖ ಅನುಭವಿಸಲಿಕ್ಕೆ ಬೇಕಾದರೆ ಇನ್ನೊಮ್ಮೆ ಹೋಗುತ್ತೇನೆ.

ಇನ್ನು ನನ್ನ ಟಿಕೇಟ್ ಖರ್ಚಿಗೆ ೬೫ ಸಾವಿರ ರೂಪಾಯಿಗಳು ಖರ್ಚಾಗಿವೆ. ನನ್ನ ಜೊತೆಗೆ ನಾಲ್ಕು ಜನ ಆಫೀಸರ್ಸ್ ಬಂದಿದ್ದರು. ಕೆ. ಎಸ್. ಐ. ಡಿ. ಸಿ ಯ ಎಂ. ಡಿ. ಯವರು, ಇಂಡಸ್ಟ್ರೀ ಡಿಪಾರ್ಟ್‌ಮೆಂಟ್‌ನ ಡೈರೆಕ್ಟರ್‌ರವರು, ಕಿಯೋನಿಕ್ಸ್‌ನ ಎಂ. ಡಿ. ಯವರು ಬಂದಿದ್ದರು. ಅವರಿಗೆಲ್ಲಾ ಒಟ್ಟು ಖರ್ಚು ಸುಮಾರು ೧.೭೫ ಆಗಿದೆ.

ಶ್ರೀ ಬಿ. ಲಕ್ಕಪ್ಪ.—ಈಗ ನಮ್ಮ ರಾಜ್ಯದಲ್ಲಿರುವ ಕಾರ್ಖಾನೆಗಳು ವಿದ್ಯುಚ್ಛಕ್ತಿಯ ಕೊರತೆಯನ್ನು ಅನುಭವಿಸುತ್ತಾ ಇವೆ. ರಾಜ್ಯದಲ್ಲಿ ಬರಗಾಲ ಇರತಕ್ಕಂಥ ಈ ಪರಿಸ್ಥಿತಿಯಲ್ಲಿ ಅಲ್ಲಿಂದ ಇಲ್ಲಿಗೆ ಬಂದು ತಮ್ಮ ಬಂಡವಾಳವನ್ನು ಹೂಡಿ, ಕಾರ್ಖಾನೆಗಳನ್ನು ಸ್ಥಾಪಿಸತಕ್ಕಂಥವರಿಗೆ ವಿದ್ಯುಚ್ಛಕ್ತಿಯನ್ನು ಎಲ್ಲಿಂದ ಕೊಡುತ್ತೀರಿ ? ವಿದ್ಯುಚ್ಛಕ್ತಿ ಪೂರೈಸುವುದಕ್ಕೆ ನಿಮಗೆ ಸಾಧ್ಯವಿದೆಯೇ ? ಅಂತಹ ಅನಿವಾಸಿ ಭಾರತೀಯರಿಂದ ಪ್ರಾರಂಭಿಸಲ್ಪಟ್ಟ ಕೈಗಾರಿಕೆಗಳು ಯಾವುವು ? ಇಂತಹ ವಿದ್ಯುಚ್ಛಕ್ತಿಯ ಕೊರತೆ ಇತ್ತು ರಾಜ್ಯದಲ್ಲಿರುವ ಬರಗಾಲ ಪರಿಸ್ಥಿತಿಯ ಈ ಸಮಯದಲ್ಲಿ ತಾವುಗಳು ವಿದೇಶಗಳಿಗೆ ಪ್ರವಾಸ ಮಾಡುವ ಅವಶ್ಯಕತೆ ಇತ್ತೇ ? ತಮ್ಮ ಪ್ರವಾಸದಿಂದ ರಾಜ್ಯಕ್ಕೆ ಆದ ಪ್ರಯೋಜನ ಏನು ?

ಶ್ರೀ ಜೆ. ಹೆಚ್. ಪಟೇಲ್.—ನಾನು ಅನಿವಾಸಿ ಭಾರತೀಯರು ನಮ್ಮ ರಾಜ್ಯದಲ್ಲಿ ತಮ್ಮ ಬಂಡವಾಳವನ್ನು ಹೂಡುವಂತೆ ಅಂದರೆ ಕೈಗಾರಿಕೆಗಳನ್ನು ಇಲ್ಲಿ ಸ್ಥಾಪಿಸುವಂತೆ ಕೋರಲು ಅಲ್ಲಿಗೆ ಹೋಯಿದ್ದು. ನಾನು ಹೋಗುವಾಗ ರಾಜ್ಯದಲ್ಲಿ ಬರಗಾಲ ಇರಲಿಲ್ಲ. ತಾವುಗಳು ಆಗಲೂ ಬರಗಾಲ ಇತ್ತು ಎನ್ನುವುದಾದರೆ, ಈಗಿನ ನಾಲ್ಕು ವರ್ಷಗಳಿಂದಲೂ ನಮ್ಮ ರಾಜ್ಯದಲ್ಲಿ ಮಳೆ ಸರಿಯಾಗಿ ಬೀಳುತ್ತಿಲ್ಲ.

ವಿದ್ಯುಚ್ಛಕ್ತಿಯ ಬಗ್ಗೆ ಹೇಳುವುದಾದರೆ, ನಾನು ಅದಕ್ಕೆ ಒಂದು ವಿಷಯವನ್ನು ಅಲ್ಲಿ ಪ್ರಸ್ತಾಪ ಮಾಡಿದ್ದೇನೆ. ಇಲ್ಲಿ ಬರತಕ್ಕಂಥ ಯಾವುದೇ ಲೈಲ್ ಇಂಜಿನೀಯರಿಂಗ್, ಫುಡ್ ಪ್ರೊಸೆಸಿಂಗ್, ಲೆದರ್ ಇಂಡಸ್ಟ್ರೀಸ್. ಇಲೆಕ್ಟ್ರಾನಿಕ್ಸ್, ಹೀಗೆ ಯಾವುದೇ ಇರಲಿ. ಅವರಿಗೆಲ್ಲಾ ನಿಮಗೆ ಬೇಕಾಗುವ ವಿದ್ಯುಚ್ಛಕ್ತಿಯನ್ನು ನೀವೇ ಕ್ಯಾಪ್ಟಿವ್ ಜನರೇಷನ್ ಮಾಡಿಕೊಳ್ಳಬೇಕು, ೫೦ ಭಾಗದಷ್ಟಾದರೂ ನಿಮ್ಮದನ್ನು ನೀವು ಇಟ್ಟುಕೊಳ್ಳಬೇಕು. ಪವರ್ ಓರಿಯಂಟೆಡ್ ಕೈಗಾರಿಕೆಗಳಿಗೆ ನಾವು ವಿದ್ಯುಚ್ಛಕ್ತಿಯನ್ನು ಕೊಡುವುದಿಲ್ಲ ಎಂದು ಹೇಳಿದ್ದೇನೆ. ಇಲ್ಲಿಗೆ ಬರತಕ್ಕಂಥವರು ಕೂಡ ಆ ವಿಷಯವನ್ನು ತಿಳಿದುಕೊಂಡಿದ್ದಾರೆ. ಅಂತೆಯೇ ಪವರ್ ಸೆಕ್ಟಾರ್‌ನಲ್ಲಿ ಇನ್‌ವೆಸ್ಟ್‌ಮೆಂಟ್ ಮಾಡುವವರು ಕೂಡ ಇದ್ದಾರೆಂದು ಹುಡುಕುವುದಕ್ಕೆ ನಾವು ಹೋಗಿದ್ದೆವು. ಯು. ಎಸ್. ಎ. ದಲ್ಲಿನ ಎನ್. ಆರ್. ಐ. ಕ್ಯಾಪಿಟಲ್ ಕಾರ್ಪೊರೇಷನ್, ಮತ್ತು ಬೆಟಲ್ ಕಂಪನಿ ಯವರು ಪವರ್ ಸೆಕ್ಟಾರ್‌ನಲ್ಲಿ ಇನ್‌ವೆಸ್ಟ್‌ಮೆಂಟ್ ಮಾಡುವುದಕ್ಕೆ ತಯಾರಾಗಿದ್ದಾರೆ. ಇನ್ನೂ ಕೆಲವಾರು ಕಂಪನಿಗಳು ಈ ದಿಶೆಯಲ್ಲಿ ಇನ್‌ವೆಸ್ಟ್‌ಮೆಂಟ್ ಮಾಡುವುದಕ್ಕೆ ಸಿದ್ಧರಾಗಿದ್ದಾರೆ. ಇವೊತ್ತು ಕೇಂದ್ರ ಸರಕಾರದ ನೀತಿ ಬದಲಾವಣೆಯಾಗಿ ಪವರ್ ಸೆಕ್ಟಾರ್‌ನಲ್ಲಿ ಖಾಸಗಿಯವರು ಬಂಡವಳ ಹೂಡಬಹುದು ಎಂದು ಆಗಿದೆ. ಆ ದಿಶೆಯಲ್ಲಿ ನಾವು ಪ್ರಯತ್ನ ಮಾಡಿದ್ದೇವೆ.

ಶ್ರೀ ಬಿ. ಲಕ್ಕಪ್ಪ.—೨೬ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಈ ತರಹ ಬಂಡವಾಳ ಹೂಡತಕ್ಕಂತಹವರು ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾದವರ ಪರ್ಮಿಷನ್ ತೆಗೆದು ಕೊಂಡಿದ್ದಾರೆಯೇ ? ಇವರಿಗೆ ಪರ್ಮಿಷನ್ ಸಿಕ್ಕಿದೆಯೇ ? ಯಾವ ಯಾವ ಕಾರ್ಖಾನೆಗಳು ಪ್ರಾರಂಭವಾಗಿವೆ ? ಅಂತೆಯೇ ಸಾಮಾನ್ಯವಾಗಿ ಅಮೆರಿಕಾ ಪ್ರವಾಸ ಮಾಡುವವರು ಯಾವುದಾದರೂ ಕಾಯಿಲೆಯ ಉಪಚಾರಕ್ಕಾಗಿ ಹೋಗುತ್ತಾರೆ. ಹಾಗೆ ತಾವುಗಳು ಏನಾದರೂ ಕಾಯಿಲೆಯ ತಪಾಸಣೆಗೆ ಹೋಗಿದ್ದೀರಾ ?

ಶ್ರೀ ಜೆ. ಹೆಚ್. ಪಟೇಲ್.—೨೬ ಕೈಗಾರಿಕೆಗಳು ಪ್ರಾರಂಭವಾಗಿವೆ. ಒಟ್ಟು ೮೧ ಪ್ರಾಜೆಕ್ಟ್‌ಸ್, ಆಫರ್ ಇವೆ. ಕೆಲವರು ತಮಗೆಬೇಕಾದ ಭೂಮಿಯನ್ನು ವಶ ಮಾಡಿಕೊಂಡಿದ್ದಾರೆ. ಬೇರೆ ಬೇರೆ ಇನ್‌ಫಾಸ್ಟ್ರಕ್ಚರಲ್ ಇವೆ. ಈ ಬಗ್ಗೆ ಆರ್ ಬಿ ಐ ಯವರು ಪರ್ಮಿಷನ್ ಯಾವುದೂ ಇಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸದಸ್ಯರು ವಿದೇಶಿ ಹಣವನ್ನು ಇಲ್ಲಿ ಹೂಡುವುದಕ್ಕೆ ತಾವು ಪರ್ಮಿಷನ್ ಕೊಡುತ್ತೀರಾ ? ಮತ್ತು ಆರ್ ಬಿ ಐ ಯವರ ಪರ್ಮಿಷನ್ ಇಲ್ಲದೇ ಇಲ್ಲಿ ಹಣ ಹೂಡಲು ಸಾಧ್ಯವೇ ಎಂದು ಕೇಳಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್.—ಅಲ್ಲಿಂದ ಕ್ಲೀಯರೆನ್ಸ್ ತೆಗೆದುಕೊಂಡು ಬಂದವರಿಗೆ ಮಾತ್ರ ನಾವು ತೆಗೆದುಕೊಳ್ಳುವುದು. ಕೆಲವರು ಈಗಾಗಲೇ ಭಾರತ ಸರಕಾರದವರ ಕಡೆಯಿಂದ ಕ್ಲೀಯರೆನ್ಸ್ ತೆಗೆದುಕೊಂಡು ಬಂದಿದ್ದಾರೆ,

ಇನ್ನು ಕಾಯಿಲೆ ವಿಚಾರದಲ್ಲಿ ಹೇಳುವುದಾದರೆ, ನಾನು ನನ್ನ ಕಾಯಿಲೆಯನ್ನು ರಿಪೇರಿ ಮಾಡಿಸಿ ಕೊಳ್ಳಲಿಕ್ಕೆ ಆಲ್ಲಿಗೆ ಹೋಗಲಿಲ್ಲ. ಮತ್ತು ಅಲ್ಲಿಗೆ ಚೆನ್ನಾಗಿ ಕೆಲಸದ ಒತ್ತಡದಿಂದಾಗಿ ಕಾಯಿಲೆ ಕಡೆಗೆ ಗಮನವನ್ನು ಕೂಡ ಕೊಡಲಿಕ್ಕೆ ಆಗಲಿಲ್ಲ, ಸಮಯವೂ ಸಿಗಲಿಲ್ಲ. ಮಾನ್ಯ ಸದಸ್ಯರು ಹೇಳಿರುವುದನ್ನು ಜ್ಞಾಪಿಸಿಕೊಂಡು ಈ ಸಾರಿ ಹೋದರೆ ಕಾಯಿಲೆ ಬಗ್ಗೆ ಗಮನ ಕೊಡುತ್ತೇನೆ.

ಅಫ್ಜಲ್‌ಪುರ ತಾಲ್ಲೂಕಿನಲ್ಲಿ ಪಶುವೈದ್ಯ ಶಾಲೆ

೭೯ (೩೭೮) ಶ್ರೀ ಎಂ. ವಿ. ಗುತ್ತೇದಾರ್ (ಅಫ್ಜಲ್‌ಪುರ).—ಮಾನ್ಯ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಅಫ್ಜಲ್‌ಪುರ ತಾಲ್ಲೂಕಿನ ಕರ್ಜಗಿ ಮತ್ತು ಆತನೂರು ಹೋಬಳಿಗಳಲ್ಲಿ ಪಶುವೈದ್ಯಶಾಲೆಗಳ ಕೊರತೆ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ಆಸ್ಪತ್ರೆಗಳು ಸಾರ್ವಜನಿಕರ ಅದರಲ್ಲೂ ರೈತರ ಹಿತದೃಷ್ಟಿಯಿಂದ ಅತ್ಯವಶ್ಯವಾಗಿರುವುದರಿಂದ ಈ ವರ್ಷವೇ ಈ ಆಸ್ಪತ್ರೆಗಳನ್ನು ಸರ್ಕಾರದವರು ಮಂಜೂರು ಮಾಡುವರೆ ?

ಇ) ಭತ್ತರಗಳ ಮತ್ತು ನಾಗನೂರು ಗ್ರಾಮಸ್ಥರಿಂದ ದನಗಳ ಆಸ್ಪತ್ರೆಯ ಸಲುವಾಗಿ ಈಗಾಗಲೇ ಜಾಗವನ್ನು ಕೊಂಡಿದ್ದರೂ, ಇಲ್ಲಿಯವರೆಗೆ ಆಸ್ಪತ್ರೆ ಕೆಲಸ ಪ್ರಾರಂಭಿಸದಿರಲು ಕಾರಣವೇನು, ಹಾಗೂ ಇದನ್ನು ಶೀಘ್ರವಾಗಿ ಪ್ರಾರಂಭಿಸಲಾಗುವುದೆ ?

ಶ್ರೀ ಸಿದ್ದರಾಮಯ್ಯ (ಪಶುಸಂಗೋಪನಾ ಸಚಿವರು).—

ಅ) ಬಂದಿದೆ.

ಆ) ಪ್ರಸಕ್ತ ಸಾಲಿನಿಂದ ಇಲಾಖೆಯ ಎಲ್ಲಾ ಪಶುವೈದ್ಯ ಶಾಲೆಗಳನ್ನು ಆಯಾ ಜಿಲ್ಲಾ ಪರಿಷತ್ತುಗಳ ಅಧಿಕಾರ ವ್ಯಾಪ್ತಿಗೆ ವರ್ಗಾಯಿಸಿರುವುದರಿಂದ ಇನ್ನು ಮುಂದೆ ಹೊಸ ಪಶುವೈದ್ಯ ಶಾಲೆಗಳನ್ನು ತೆರೆಯುವುದು ಆಯಾ ಜಿಲ್ಲಾ ಪರಿಷತ್ತುಗಳಿಗೆ ಸೇರಿರುತ್ತದೆ.

ಇ) ಇದೂ ಸಹ ಗುಲ್ಬರ್ಗಾ ಜಿಲ್ಲಾ ಪರಿಷತ್ತಿನ ಕಾರ್ಯ ವ್ಯಾಪ್ತಿಯಲ್ಲಿ ಬರುತ್ತದೆ.

ಶ್ರೀ ಎಂ. ವಿ. ಗುತ್ತೇದಾರ್.—ಕಳೆದ ಸಲ ಇಲ್ಲಿ ಇದೇ ವಿಷಯವನ್ನು ನಾನು ಪ್ರಸ್ತಾಪಿಸಿದ್ದಾಗ ಆಸ್ಪತ್ರೆ ಕೊಡುವ ಭರವಸೆಯನ್ನು ಮಂತ್ರಿಗಳು ಕೊಟ್ಟಿದ್ದರು. ಆದರೆ ಈಗ ಜಿಲ್ಲಾಪರಿಷತ್ತುಗಳಿಗಾಗಿ ಅವುಗಳಿಗೆ ಸೇರಿದ್ದೆಂದು ಹೇಳುತ್ತಿದ್ದಾರೆ. ಅಲ್ಲಿ ಆವರನ್ನು ನಾನು ಕೇಳಿದರೆ ದುಡ್ಡಿಲ್ಲ ಸ್ವಾಮಿ ಎನ್ನುತ್ತಾರೆ. ಅಷ್ಟೇ ಅಲ್ಲ, ಅನೇಕ ಆಸ್ಪತ್ರೆಗಳಲ್ಲಿ ಮೆಡಿಸಿನ್ ಇಲ್ಲ. ಇಂಥಾ ಸ್ಥಿತಿ ನಡೆಯುತ್ತಿರುವಾಗ ಇದಕ್ಕೆ ವಿಶೇಷವಾಗಿ ಏನಾದರೂ ಫೈನಾನ್ಷಿಯಲ್ ಹೆಲ್ಪ್ ಮಾಡುತ್ತೀರಾ ?

ಶ್ರೀ ಸಿದ್ದರಾಮಯ್ಯ.—ಹೌದು, ಕಳೆದಬಾರಿ ಅವರು ಕೇಳಿದಾಗ ಅಲ್ಲಿ ಪಶುವೈದ್ಯಶಾಲೆ ಆಗತ್ಯವಿದೆ ಎಂದು ಹೇಳಿದ್ದೆ. ಈ ವರ್ಷದಿಂದ ಜಿಲ್ಲಾಪರಿಷತ್ತುಗಳ ಆಸ್ತಿತ್ವಕ್ಕೆ ಬಂದ ಮೇಲೆ ಎಲ್ಲಾ ಪಶುವೈದ್ಯಶಾಲೆಗಳೂ ಅವುಗಳ ವ್ಯಾಪ್ತಿಗೆ ಬಂದಿರುತ್ತವೆ. ಆದ್ದರಿಂದ ಇನ್ನು ಮುಂದೆ ನಾವು ಮಂಜೂರು ಮಾಡುವ ವಿಚಾರ ಬರುವುದಿಲ್ಲ. ಆದರೆ ಇವರು ಯಾವ್ಯಾವ ಆಸ್ಪತ್ರೆಯಲ್ಲಿ ಔಷಧಗಳಿಲ್ಲ ಎಂದು ಹೇಳಲಿ, ನಾನು ಅಲ್ಲಿಗೆ ಔಷಧಗಳನ್ನು ಸರಬರಾಜು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

(ಗೊಂದಲ)

ಶ್ರೀ ಎನ್. ಧರ್ಮಸಿಂಗ್.—ಅಧ್ಯಕ್ಷರೇ, ಇವರು ಈ ರೀತಿ ಹೇಳುವುದನ್ನು ನೋಡಿದರೆ...

(ಗೊಂದಲ)

ಅಧ್ಯಕ್ಷರು.—ನೋಡಿ, ನನಗೆ ಜವಾಬ್ದಾರಿ ಇದೆ.

ಶ್ರೀ ಎನ್. ಧರ್ಮಸಿಂಗ್.—ನಮಗೂ ಜವಾಬ್ದಾರಿ ಇದೆ.

ಅಧ್ಯಕ್ಷರು.—ನನ್ನ ಜವಾಬ್ದಾರಿ ಪ್ರಕಾರ ಈಗ ಕೊಶ್ಚನ್ ಆವರ್ ಮುಗಿಯಲಿ ಎಂದು ಎಲ್ಲಿರಿಗೂ ಅವಕಾಶ ಕೊಟ್ಟಿದ್ದೇನೆ. ಎರಡೆರಡು ಉಪಪ್ರಶ್ನೆ ಮಾತ್ರ ಕೇಳಬೇಕೆಂದು ಹೇಳಿದ್ದೆನು. ಆಗ ನೀವಿರಲಿಲ್ಲ. ಈಗ ಮಾನ್ಯ ಗುತ್ತೇದಾರ್‌ರವರ್ ನಿಮ್ಮನ್ನು ಕೇಳಲು ಬಿಟ್ಟರೆ ಹೇಳಿ.